Regd No B G 155 Sn 24—4—1965

ಸತ್ಯವಾದಿ

48th Year
Satyavadi
DAILY
MYSOR 4

ಸಂಸ್ಥಾಪಕರು — ಆವಮನೆ ಸುಬ್ಬೇದಾರ್ ಎಂ ವಿ ಶುಭ್ರತಾಯಮ್ಮ ಪ್ರಕಾಶಕರು — ಧರ್ಮಪ್ರಚಾರಕ ಎಂ ಎಸ್ ಕೃಷ್ಣರಾವ್ 2 ಪೈಸೆ

(77) 2

ವಿವಿಧ ವಿಷಯಗಳು

★

ಧರ್ಮಾವತಿ — ಕಮಲಮ್ಮ ಎಂಬಾಕೆ ತನ್ನ ಇಬ್ಬರು ಮಕ್ಕಳಿಗೂ ಘಾಲಿ ಡಾಲನ್ನು ಕೊಟ್ಟು ತಾನೂ ಸೇವಿಸಿ ಎಲ್ಲರೂ ಸತ್ತು ಬಿದ್ದಿದ್ದರು

ಬೀಡರ್ — ಏಂಕಾಲು ಗ್ರಾಮದ ಕಾಪ್ರೆಹ್ಯಾತದರೋಡೆಗಾರನು ಬಂಧಿಸಲ್ಪಟ್ಟನು ; ಅವನಲ್ಲಿದ್ದ 303 ಕುಪಾಕಿಗಳೂ, 410 ಮಸ್ಕೆತ್ ವಶಪಡಿಸಿಕೊಳ್ಳಲಾಯಿತು.

ಬೆಂಗಳೂರು — ಸಿನೀವಾಸ್ಕೆ ಹೋಗುವವರ ಮೇರೆ ಮತ್ತು ಬೆಂಗಳೂರಿಗೆ ಬಂದ ಪ್ರವಾಸಿಕರ ಮೇಲೆ ತೆರಿಗೆ ಹಾಕಬೇಕೆಂದು ಕಾರ್ಪೋರೇಷನ್ನು ಎಸಾಟಿಂಗಿನಲ್ಲಿ ಸದಸ್ಯರೊಬ್ಬರು ಸಲಹೆಮಾಡಿದರು.

ರಾಮನಿಗೆಡೆಯಿಲ್ಲದ ರಾಮರಾಜ್ಯ

ಮಹಾತ್ಮಾ ಗಾಂಧೀಜೀಯವರು ರಾಮರಾಜ್ಯದ ಕನಸು ಕಾಣುತ್ತಿದ್ದರು: ಅವರ ಮರಣಾನಂತರ ಆ ಹೆಸರೂ ಬದಲಾಗಿಹ್ಯು ; ಇಂದು ಅಂತಹ ಹೆಸರುಗಳಿಗೆ ಇತಿಮಿತಿ ಇಲ್ಲ ; ಅದೂ ಅಪ್ಪಿತಪ್ಪಿ ರಾಮರಾಜ್ಯದ ಹೆಸರು ಇಂದೂ ಕೂಡಾ ಕೇಳಿಬರುತ್ತಿದೆ : ಆ ರದಜ್ಯದಲ್ಲಿ ರಾಮನಿಗೆ ಎಡೆಯೇ ಇಲ್ಲವಾಗಿದೆ.

ಈ ವರ್ಷ ಶ್ರೀರಾಮನವಮಿ ಇದೇ ತಿಂಗಳ ದಿನಾಂಕ ಹತ್ತರಂದು ರಾಷ್ಟ್ರದಾದ್ಯಂತ ಕೊಂಡಾಡಲ್ಪಟ್ಟಿದೆಯೇ ? ಭಾರತೀಯ ಸರಕಾರ ಅದಿನಿಶಾದ ಕೂ ಲಕ್ಷ್ಯಕೊಟ್ಟಿತ್ತೆ ?

ಏಪ್ರಿಲ್ ದಿನಾಂಕ ಹತ್ತು ಎಂಡನೇ ಶನಿವಾರವಾಗಿಹ್ಯು ; ಅಂದು ಸರಕಾರಿ ಕಾಲ್ಯಾಲಯ ಕಚೇರಿಗಳಿಗೆ ರಜಾದಿನ ; ಕೆಲ ವರ್ಷಹುದ ಹಿಂದೆ ಮದರಾಸು ಸರ್ಕಾರದಲ್ಲಿ ಒಂದು ಪಂದ್ಯಾಟ ನಡೆದಾಗ ಇಲ್ಲಿಯ ಕಾರ್ಯಾಲಯ ಕಚೇರಿಗಳಿಗೆ ರಜೆ ಕೊಟ್ಟಿದ್ದರು ; ಅದರ ಬದಲು ಏಪ್ರಿಲ್ ತಿಂಗಳ ಎಂಡನೇ ಶನಿವಾರದಂದು ಎಲ್ಲರೂ ಕೆಲಸ ಮಾಡಬೇಕು ; ಕೇಂದ್ರ ಸರಕಾರವೂ ರಾಜ್ಯ ಸರಕಾರವೂ ಅಂತಹದೇ ಆಜ್ಞೆಯನ್ನಿತ್ತಿದ್ದವು : ಈ ಎಂಡನೇ ಶನಿವಾರದಂದು ರಾಮನವಮಿ ಎಂಬುದು ಆಗ ಸಂಬಂಧಪಟ್ಟವರಿಗೆ ಜ್ಞಾಪಕವಿದ್ದಿಲ್ಲವೋ ಏನೋ, ಅಸಂತಕ ತನ್ನ ತಪ್ಪಿನ ಅರಿವಾಯಿತು ರಾಜ್ಯ ಸರಕಾರಕ್ಕೆ ; ಆಜ್ಞೆಯಂದು ತಿದ್ದುಪಡಿ ಮೂಲಕ ರಾಮನವಮಿ ರಜವೆಂದೂ, ಮೇ ತಿಂಗಳ ಎರಡನೇ ಶನಿವಾರದ ಕೆಲಸದ ದಿನವೆಂದೂ ಘೋಷಿತ ; ಕೇಂದ್ರ ಸರ್ಕಾರ ಮಾತ್ರ ತನ್ನ ಮುಚ್ಚಿದ ಕಣ್ಣನ್ನು ತೆರೆಯಲೇಇಲ್ಲ.

ಮಹಾತ್ಮಾ ಗಾಂಧೀಜಿಯವರ ಜನ್ಮದಿನ ರಜವಿದೆ : ಆದರೆ ಅವರೇ ಯಾವ ನಾಮವನ್ನು ಜಪಿಸುತ್ತಿದ್ದರೋ, ಆ ರಾಮ ಹೆಸರು ಅವರಿಗೆ ರಕ್ಷಕವಚವಾಗಿ ತೊಟ್ಟೇ ಆ ಅದರ್ಶ ಪುರುಷನ ಜನ್ಮದಿನದಂದು ರಜೆ ಇರುವುದಿಲ್ಲ : ನೈಸರ್ಗಿಕವಾಗಿ ಅದ್ದು ರಜಾದಿನವಾಗಿದ್ದರೂ ಈ ಸರಕಾರ ಅಂದು ಕೆಲಸದ ದಿನವೆಂದು ಘೋಷಿಸಿತ್ತಿದೆ ; ಭಾರತೀಯರಿಗೆ ಆ ಶ್ರೀ ರಾಮಚಂದ್ರಪ್ರಭು ಮಹಾತ್ಮಾ ಗಾಂಧೀಜೀಯವರಿಗಿಂತಲೂ ಕೆಳಮಟ್ಟದವನೇನು ?

[ಹಿಂದಿನ ಪುಟದಲ್ಲಿ ಮುಂದುವರಿದಿದೆ]

ಕಳ್ಳರ ಪಾಠಶಾಲೆ

ಬ್ಯಾಂಗಕಾಕ್ — ಕಳ್ಳತನದ ತರಬೇತಿ ಕೊಡುತ್ತಿದ್ದ ಶಾಲೆ ಮೇಲೆ ಪೋಲೀಸರು ಧಾಳಿ ನಡೆಸಿ ಒಬ್ಬ ಉಪಾಧ್ಯಾಯ ಮತ್ತು ಹತ್ತು ಮಂದಿ ಶಿಷ್ಯರನ್ನು ಬಂಧಿಸಿದರು.

★

ಹಿಂದಿ ಷೀಕಲಾಟ

ವೆಲ್ಲೂರು — ಅನೇಕ ತಿಮಿಳರೂ ಹರಿಜನರು ಪೂರ್ತಾ ಹಿಂದಿಯಲ್ಲೇ ಇದ್ದು ಇಲ್ಲಿ ಗೊತ್ತಾಗುವುದಿಲ್ಲವಾಗಿ, ಆ ಪುಗಳನ್ನೆ ಅಸ್ಪೃಶ್ಯರಿಗಾಗಿ ಮದರಾಸಿಗೆ ಕಳಹಿಸಲಾಗುತ್ತಿದೆ.

★

ಬೆಂಗಳೂರು — ಶಾಸನಸಭೆಯ ಈ ಸಾರಿ ಅಧಿವೇಶನ ನಿನ್ನೆ ಸಂಜೆ ಮುಕ್ತಾಯಗೊಂಡಿತು

●

ಮೈಸೂರು ಪುರಸಭೆಯ ಸ್ತ್ರೀತ್ವ ಕಾರ್ಯ

ಮೈಸೂರು — ಪೌರಸಭೆಯ ಈ ಮಾಹೆಯ ಅಧಿವೇಶನವು ತಾ|| 30 ಶುಕ್ರವಾರ ಪೂರ್ವಾಹ್ನ 4 ಗಂಟೆಗೆ ನಡೆಯಲಿದೆ. ಈ ಸಭೆಯ ಅಜೆಂದಾ ಕನ್ನಡಲ್ಲಿರುವುದು ಸ್ತುತ್ಯರ್ಹ !

★

ಸೌಂಸಭೆ

ಮೈಸೂರು — ಪೌರಸಭೆಯ ಮುಂದಿನ ಮಂದ ಅಧಿವೇಶನವು ಪೂರ್ವಭಸದಲ್ಲಿ ತಾ|| 24 ಶನಿವಾರ ಪೂರ್ವಾಹ್ನ 10½ ಗಂಟೆಗೆ ನಡೆಯುವುದು.

★

ನಾಳೆಯಿಂದ ಸಂಚಾರಿಂಗ ದೈವಜ್ಞ ಶಿಖಾಮಣಿ

ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರಮ್ಯಾಪಕ್ಕ, ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣಜೋಯಿಸರಿಂದ

25 ಭಾನುವಾರ ಸಮಯ ಧನಿಷ್ಠ

ಮೇಳೆ ಯುದ್ಧ ಹೂಡಿ

ಉಜ್ಜಯಿನಿ — ಖಿಲ ಭಾರತ ಜೈವಿಕ ಉಲ್ ಉಲೇಮಾ ಕಾರ್ಯದರ್ಶಿ ಮೌಹಾನಾ ಮುಸಾದ್ ಅಹಮದರು ಸರಕಾರಕ್ಕೆ ವಿನಂತಿಸಿ, ಪಾಕಿಸ್ತಾನ ಹಾಗು ಚೀನಾ ಆಕ್ರಮಿಸಿರುವ ಸ್ಥಳಗಳನ್ನು ಮತ್ತೆ ಪಡೆಯಲು ಯುದ್ಧ ಹೂಡುವಂತೆ ತಿಳಿಸಿದರು — ಕಚ್ ಭಾಗದಲ್ಲಿ ಪಾಕಿಸ್ತಾನದ ಆಕ್ರಮಣವು ಭಾರತೀಯ ಮುಸ್ಲಿಮರಿಗೆ ಮನಸೊಂದಿದೆಯೆಂಬುದೂ, ರಾಷ್ಟ್ರದ ಗೌರವ ಮತ್ತು ಸ್ವಾಭಿಮಾನ ಕಾಪಾಡಲು ತಾವು ಎಲ್ಲ ತ್ಯಾಗಕ್ಕೂ ಸಿದ್ಧವೆಂದೂ ಹೇಳಿದರು.

★

ಬಂದೂಕ ಪ್ರಯೋಗ

ನವಹಿಲಿ — ಕಚ್-ಸಿಂಧ್ ಗಡಿಯಲ್ಲಿ ಪಾಕಿಸ್ತಾನವು ಷೆಲ್ ಮಾಡಲು ಹೊಂಟಾಗ ನಾವೂ ನಮ್ಮ ಬಂದೂಕಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹ್ಯೆವೆಂದು ರಕ್ಷಣಾ ಮಂತ್ರಿ ಜಗಜೀವನರು ಮೊನ್ನೆ ಲೋಕಸಭೆಯಲ್ಲಿ ತಿಳಿಸಿದಾಗ ಸಭೆಯಲ್ಲಿ ಜಯಘೋಷಗಳಾದವು

★

ಮಿಂಚಿನ ಹೊಡೆತ

ತುಮ್ಕೂರು — ಮೊನ್ನೆ ಮಿಂಚಿನ ಹೊಡೆತದಿಂದ 5 ಮಂದಿ ಸತ್ತು ಏಳು ಮಂದಿ ಗಾಯಗೊಂಡರು

★

ಶತಾಯು

ಜಮ್ಮು — ಪೊನ್ನೆ ನೂರು ವರ್ಷ ತುಂಬಿದ ಹವಿಲ್ದಾರ್ ಗಾಂಧಾರಾಂಬು ಸಿಂಗನು ತನ್ನ ದೀರ್ಘಾಯುವಿಗೆ ತಿಸ್ಕೇ ಕಾರಣವೆಂದು ಹೇಳಿದನು : ಈತನು ಇನ್ನೂ ಆರೋಗ್ಯವಾಗಿ ಗಟ್ಟಿಮುಟ್ಟಾಗಿದ್ದಾನೆ ಈತನಿಗೆ ಕೊಟ್ಟ ನಿಧಿಯನ್ನು ತನ್ನ ಗ್ರಾಮದ ಅಭಿವೃದ್ಧಿಗಾಗಿ ಕೊಟ್ಟುಬಿಟ್ಟನು.

ಇದು ಧರ್ಮಾತೀತ ಅಥವಾ ಮತಪರಿಣಾಮ ಸ್ಥಂಭಾಗ್ನಿ ವಾಗಿರುವದರಿಂದ ಶ್ರೀ ರಂಗ ನವಮಿಯಂದು ರಜೆ ಕೊಡುವುದಿಲ್ಲ : ಅಲ್ಲದೆ ಅಂದು ರಜಾದಿನವಾಗಿದ್ದ ೩೦ ಕೆಲಸದ ದಿನವನ್ನಾಗಿ ಘೋಷಿಸಿಬಹುದೆನ್ನುವುದು ನಾಯೇನು ? ಸರ್ಕಾರಿ ಕಾರ್ಯಾಲಯ ಕಛೇರಿಗಳಲ್ಲಿ ಎಂಟು ವಿಧದ ರಜಾದಿನಗಳಿವೆ : ಒಂದು, ಅಂದು ಸಂಪೂರ್ಣ ಕೆಲಸವಿರುವುದಿಲ್ಲ ಅಥವಾ ಪೂರ್ಣ ರಜ ; ಇನ್ನೊಂದು ಕಾರ್ಯಾಲಯ ಕಛೇರಿಗಳು ತೆಗೆದಿರುತ್ತವೆ, ಬೇಕಾದವರು ಯಂಚಿಕವಾಗಿ ಕೇಳಿ ರಜೆ ಪಡೆದುಕೊಳ್ಳಬಹುದು ಅಷ್ಟೆ ; ಶ್ರೀ ರಾಮನವಮಿ ಎಂಬರಲ್ಲದೆ ಬರ್ಕುವುದಿಲ್ಲ : ಅದಕ್ಕೆ ಒಂದು ರೀತಿ ಬಣ್ಣಕೊಡಲಿಚ್ಛಿಸುವವರಿಗಾಗಿ ಒಂದು ಘಟನೆ ನಡೆದಿರುತ್ತದೆ : ಈ ಎರಡೂ ವಿಧದ ರಜಾದಿನಗಳ ಹೆಸರನ್ನು ಯಾರಾದರೂ ಸೂಚಿಸುವರು : ಆ ಪಟ್ಟಿಯಲ್ಲಿ ಮೋಂಡಿ ಥರ್ಸ್‌ಡೇ (15-4-65) ಹೆಸರಿರಲಿಲ್ಲ : ಆದರೆ ಅದನ್ನು ಸಂತಸ ಸೇರಿಸಲಾಗಿರುತ್ತದೆ (ಮುಖ್ಯವಾಗಿ ರೈಲ್ವೇ ಇಲಾಖೆಯಲ್ಲಿ) ಮೋಂಡಿ ಥರ್ಸ್‌ಡೇಗಾದರೂ ಸಾಕಾರ ಬೇಕಾದವರಿಗೆಲ್ಲಾ ರಜ ಕೊಡಲು ಸಿದ್ಧವಿದೆ, ಆದರೆ ಶ್ರೀ ರಾಮನವಮಿ ಯಂತಹ ರಜೆ ಪಡೆಯಲು ಸಾಧ್ಯವಿಲ್ಲ : ಇದು ವಿಧವಿಧವು ಸರ್ಕಾರಕ್ಕೆ ಲಕ್ಷಣವೇನು ? ಹಿಂದೂಗಳ ಮೇಲೆ ಹೇರಿಕೆಯೇ ಯಿರುವುದು, ಅದನ್ನು ಮಾತ್ರ ತಾಂಗಡಿಯು ಪ್ರಜೆಗಳಂತೆ ನಡೆಸಿಕೊಳ್ಳುವುದು ಈ ರೀತಿಯ ಸರ್ಕಾರಕ್ಕೆ [ಸೆಕ್ಯೂಲರ್ ಗೌರ್ನಮೆಂಟ್] ಲಕ್ಷಣವೇನು ?

ಅಲ್ಲವೆ ಯಾವುದಾದರೊಂದು ಮತದ ಮಹಾಸ್ವಾಮಿಯ ಅಥವಾ ಮುಖಂಡನ ಸಕಲಶಸ್ತ್ರಾಸ್ತ್ರಾದಿಯಾಗಿ ಅಲ್ಪವಾಗಿ ಹೇಳಿದಲ್ಲಿ ಯಾರಾದರೂ ಬರೆದಿದ್ದಲ್ಲಿ, ಅಬ್ಬಾ ! ಅದೆಷ್ಟು ಗಲಾಟೆಯಾಗಿಬಿಡುತ್ತದೆ : ಭಾರತೀಯ ವಿದ್ಯಾಭ್ಯಾಸದವರೊಂದು ಪುಸ್ತಕವನ್ನು, ಅದೂ ಅನ್ಯದೇಶದಲ್ಲಿ ಅದೆಂದೋ ಬೆಳಕು ಕಂಡಿರುವುದನ್ನು, ಪ್ರಕಟಿಸಿದುದಕ್ಕಾಗಿ ಏನೆಲ್ಲಾ ನಡೆದು ಹೋಗಲಿಲ್ಲ ? ಭಾಷಣದ ಸಮಯ ಸೈಡಸಂಗತಿಗಳನ್ನೇ ಹೇಳಿದರೆ ಕೂಡಾ, ಸಭೆಯನ್ನು ಮುಗಿಯಲು ಆಜ್ಞೆ ಕೊಡಲಾಗುತ್ತದೆ : ಆದರೆ ಹಿಂದೂಗಳ ವಿಷಯ ಯಾರು ಏನು ಬೇಕಾದರೂ ಮಾಡಬಹುದು : ಶ್ರೀ ರಾಮನವಮಿ ಪರ್ವದಿನದಂದು ಸ್ವಾಧಿಷ್ಠಾನ ಪಕ್ಷದ ವತಿಯಿಂದ [ಅದೂ ಮಾತ್ರ ತಾಡ ಕಳಗಮಿನ ಇನ್ನೊಂದು ವೇಷ] ಒಂದು ಭಿತ್ತಿಪತ್ರ ಪ್ರಕಟವಾಗಿತ್ತು ; ಅದರಲ್ಲಿ ಶ್ರೀರಾಮಮಂದಿರದ ಶಂಕುಸ್ಥಾಪನೆ ಅಲ್ಪವಾದ ಅಲ್ಪ ನುಡಿಗಳೆಲ್ಲಾ ಇದ್ದವು : ಆಗ ಸರ್ಕಾರ ಅದೇನು ಮಾಡಿತು ?

ಹಿಂದೂಸ್ಥಾನದಲ್ಲಿ ಹಿಂದೂ ಬಿಟ್ಟರೆ ಹಿಂದುಳಿದವನೆಂದು ತೋರುತ್ತದೆ,

— ವಿಷಯಂಕಿ

Help The Gorakshana



" ಗೋರಕ್ಷಣಾ " ಕ್ಕೆ ಜೀವಾಳಗಳಾಗಿರಿ

ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯಮಹಾಗಳವರು, ಶ್ರೀ ಪುರಿಯ ಜಗದ್ಗುರು ಶಂಕರಾಚಾರ್ಯಮಹಾಗಳವರು ಆಜ್ಞಾಪಿಸಿ ಉತ್ತರಾಧಿಕಾರಿಗಳನ್ನು ನೇಮಿಸಿರುವ

ಶ್ರೀ ಸದ್ಗುರು ಸಾಯಿನಾಥ ಗೋರಕ್ಷಣಾ ಸಭಾ, ಶಾಖೆಗಳು, ಶಾಖೆಯಾಚಾರ್ಯ, ಪರಮಪೂಜ್ಯ ವಿಶ್ವಾಚಾರ್ಯರಿಂದ ಕರುಣಿಸಲ್ಪಟ್ಟ ವಿಶೇಷ ಪ್ರಭಾವ ಪೂರ್ಣವಾದ ಪವಿತ್ರ ಭಸ್ಮ.

ಪ್ರತಿ ಪೂರ್ಣಿಮಾ ದಿನದಂದು " ಗೋರಕ್ಷಣಾ " ಕ್ಕೆ ಜೀವಾಳಗಳಾದ ಪ್ರೇಮಾಸ್ಪದ ಭಕ್ತವರ್ಗದವರು ತಂದಿರುವ ಭಸ್ಮವನ್ನು ಸ್ವೀಕರಿಸಲಾಗುವುದು

ಆಸಕ್ತರು ಪತ್ರ ಮುಖೇನ ಕೋರಿಕೆ ಸಲ್ಲಿಸಿದಲ್ಲಿ ಅಂಚೆಯ ಮೂಲಕ ಭಸ್ಮವನ್ನು ಕಳುಹಿಸಲಾಗುವುದು

ಶ್ರೀ ಸದ್ಗುರು ಸಾಯಿನಾಥ ಗೋರಕ್ಷಣಾ ಸಭಾ

ಕೇಂದ್ರ ಕಾರ್ಯಾಲಯ : ಶ್ರೀ ಸಾಯಿಬಾಬಾ ಮಂದಿರ, ಸಾಯಿಬಾಬಾ ಕಾಲೋನಿ, ಕೋಯಂಬತ್ತೂರು - 641 011

Central Food Technological Research Institute
MYSORE

★

Advertisement No. 5/65 (T)

One Double Bullock Cart, One lot of Fuel and four Dried up trees will be sold by Public Auction at the premises of the Institute on Wednesday the 5th May 1965 at 10 a. m. Intending Bidders may obtain furtherparticulars on payment of 15 paise per copy of Schedule of Terms and conditions of Sale either in person or by sending a self-addressed stamped cover.

ADMINISTRATIVE OFFICER

ವುಡ್‌ಲ್ಯಾಂಡ್ಸ್ 23-4-65 ರಿಂದ

ಅಮೋಘ ಆರಂಭ

.... ಮನಮೋಹನ ಈಸ್ಟ್‌ಮನ್ ಕಲರ್ ಚಿತ್ರ ....

ಬಾಘಿ (ಹಿಂದಿ) BAGHI

ತಾರಾವರ್ಗ— ಪ್ರದೀಪಕುಮಾರ್, ಲೀಲಾನಾಯ್ಡು, ಹೆಲೆನ್, ಜೀವನ್, ಉಲ್ಲಾಸ್

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— 23-4-65 ರಿಂದ

ಅಮೋಘ ತೆಲುಗು ಸಾಂಘಿಕ ಚಿತ್ರ — ದಿನ 3 ಆಟಗಳು

ರಾಮುದಾನು

ತಾರಾ- ತಾಗಯ್ಯ, ಕನ್ನಾಂಬಾ, ಗುಮ್ಮಡಿ, ಅಂಜಲಿದೇವಿ, ಶಿವಾಜಿ ಗಣೇಶನ್

SHAKTI SUDHA

A Superb Tonic

Edited, Printed and Published by the Proprietor
Dharma Prachara Nirata M S Krishna Rao
at the Satyavadi Press Cameraggram Mysore 4